Scarcity of Kerosene

SRI B. B. SAYANAK (Belgaum).—To-day, I have given one Call Attention Notice regarding scarcity of kerosene in Belgaum City. There is power cut. People are harassed. It is a most important and urgent matter.

SRI B. G. BANAKAR (Hirekerur).—I have given a Call Attention Notice regarding scarcity of Kerosene in Ranebennur, Dharwar District. There is not a drop of Kerosene.

ಶ್ರೀ ಕೊಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ವಿದ್ಯಾರ್ಥಿಗಳಿಗೆ ಪರೀಕ್ಷೆ ಸಮಯ, ಮಾನ್ಯ ಚೆನ್ನಬಸಪ್ಪನವರು ಕರೆಂಟ್ ಅನ್ನು ಖೋತಾ ಮಾಡಿದ್ದಾರೆ ಈ ಕಡೆ ಸೀಮೆ ಎಣ್ಣೆ ಇಲ್ಲ, ಕರೆಂಟೂ ಇಲ್ಲ. ಪರೀಕ್ಷೆಗೆ ಓದುವ ವಿದ್ಯಾರ್ಥಿಗಳಿಗೆ ಇಡೀ ರಾಜ್ಯದಲ್ಲಿ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಶೀಘ್ರವಾಗಿ ತಾವು ನಿರ್ಧಾರ ಕೈಗೊಂಡು ಸಹಾಯ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ಸಿಟಿಯಲ್ಲಿ ಸೀಮೆ ಎಣ್ಣೆಯ ಸಮಸ್ಯೆ ಶ್ರೀಮಾನ್ ಕೆ. ಕೆ. ಮೂರ್ತಿಯವರಿಂದ ಬಂದಿದೆ.

ಶ್ರೀ ಆರ್. ಗುಂಡೂರಾವ್.—ನಿಮಗೆ ಶ್ರೀ ಕೆ. ಕೆ. ಮೂರ್ತಿಯವರ ಹೆಸರೆ ಗೊತ್ತು. ೯೦ ಪರ್ಸೆಂಟ್ ಬೇರೆಯವರು ಮಾರುತ್ತಾರೆ· ಯಾವಾಗಲೂ ಕೆ. ಕೆ. ಮೂರ್ತಿಯವರ ಹೆಸರನ್ನೇ ಹೇಳುತ್ತೀರಿ

ಶ್ರೀ ವಾಟಾಳ್ ನಾಗರಾಜ್.—ಸ್ವಲ್ಪ ಏನಾದರೂ ಗೊತ್ತಿದ್ದರೆ ಅದು ಗುಂಡೂರಾಯರಿಗೆ ; ಮಾನ್ಯ ಗುಂಡೂರಾಯರಿಗೂ ಅವರಿಗೂ ತೀರಾ ಹತ್ತಿರದ ಸಂಬಂಧ.

ಶ್ರೀ ಆರ್. ಗುಂಡೂರಾವ್.—ಇವರು ೧೦ ಪರ್ಸೆಂಟ್ ಸಪ್ಲೈ ಮಾಡುವವರು ೯೦ ಪರ್ಸೆಂಟ್ ಸಪ್ಲೈ ಮಾಡುವವರ ಹೆಸರು ತಾವು ಏತಕ್ಕೆ ಹೇಳಲಿಲ್ಲ ?

ಶ್ರೀ ವಾಟಾಳ್ ನಾಗರಾಜ್.—ಇವರು ಎಲ್ಲಾ ಬ್ಲಾಕ್ ಮಾರ್ಕೆಟ್ ಮಾಡಿ, ನಿಮ್ಮ ಕೃಪಾಕಟಾಕ್ಷದಿಂದ ಬಾಳುವವರು.

Appointment of Administrator to the Sanivara santhe Muncipalitiy

ಶ್ರೀ ಎಚ್. ಡಿ. ದೇವೇಗೌಡ(ಹೊಳೆನರಸೀಪುರ)—ಶನಿವಾರ ಸಂತೆ ಮುನಿಸಿಪಾಲಿಟಿ ಬಗ್ಗೆ ಪ್ರಸ್ತಾಪ ಮಾಡಿದಾಗ, ಇವತ್ತು ಈ ವಿಷಯ ತೆಗೆದುಕೊಳ್ಳಿ ಎಂದು ಮಂತ್ರಿಗಳು ಹೇಳಿದರು. ಕೊಡಗು ಜಿಲ್ಲೆಯ ಕುಶಾಲ ನಗರಮುನಿಸಿಪಾಲಿಟಿ, ಶ್ರೀ ಮಾನ್ ಗುಂಡೂರಾಯರು ಅಧ್ಯಕ್ಷರಾಗಿರತಕ್ಕ...

SRI C. M. ARUMUGHAM.—Every day, you are raising half a dozen issues. It appears we all come here just to sit, watch and go. Why is one man allowed to raise half a dozen issues ? we are also sending some notices. We must also have an equal chance. We do not Know what is going on here. What is going on we are not aware of it. Whenever I raise an issue I get the answer 'No'. How is he permitted to raise this matter ?

ಅಧ್ಯಕ್ಷರು.—ನೀವು ಯಾರಾದರೂ ಏನೇ ಹೇಳಿ ಕೇಳಬೇಕಾಗುತ್ತದೆ. ದೇವೇಗೌಡರು ನಮ್ಮ ಒಕ್ಕಪ್ಪನ ಮಗ ಅಲ್ಲ. Please hear what I say. Please sit down. Do not argue.